ರಾಜ್ಯದಲ್ಲಿ ಕೃಷಿ ತರಬೇತಿ ಕಾಲೇಜು ಸ್ಥಾಪನೆ ಕುರಿತಂ

೯೪೬. ಶ್ರೀ ಜಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಕೃಷಿ ತರಬೇತಿ ಶಾಲೆಗಳಿವೆ ?

ಆ) ರಾಷ್ಟ್ರದಲ್ಲಿ ಮತ್ತು ರಾಜ್ಯದಲ್ಲಿ ಶ್ರೇಷ್ಟವಾದ ಅಮೃತ ಮಹಲ್ ಕೇಂದ್ರವಿರುವ ತರೀಕೆ ತಾಲ್ಲೂಕಿನ ಅಜ್ಜಂಪುರದಲ್ಲಿ ಕೃಷಿ ತರಬೇತಿ ಶಾಲೆಯನ್ನು ತೆರೆಯಲು ಉದ್ದೇಶಿ ಲಾಗಿದೆಯೇ ?

ಇ) ಹಾಗಿದ್ದಲ್ಲಿ ಯಾವಾಗ ತೆರೆಯಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ರಾಜ್ಯದಲ್ಲಿ ೨೧ ಕೃಷಿ ಶಾಲೆಗಳು ಇವೆ.

ಆ) ಇಲ್ಲ.

ಇ) 'ಆ' ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕಲಘಟಗಿ ತಾಲ್ಲೂಕಿನ ಹಿರೇ ಹೊನ್ನಿಹಳ್ಳಿ ಏತ ನೀರಾವರಿ ಯೋಜನೆ

೯೭೧. ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ಸಣ್ಣ ನೀರಾವರಿ ಮತ್ತು ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ತಾಲ್ಲೂಕಿನ ಹಿರೇಹೊನ್ನಿಹಳ್ಳಿ ಏತ ನೀರಾವರಿ ಯೋಜನೆ ಆಯವ್ಯಯದ ಮಂಜೂರಾಗಿದ್ದರೂ ಇಲ್ಲಿಯವರೆಗೂ ಪ್ರಾರಂಭಿಸದಿರಲು ಕಾರಣವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧೯೮೭-೮೮ ರ ಆಯವ್ಯಯದಲ್ಲಿ ಸೇರಿದ್ದರೂ ಮಂಜೂರಾತಿ ಆಗಿಲ್ಲ. ಈ ಯೋಜ ಯನ್ನು ಬಿಜಾಪುರದ ಕೃಷ್ಣ ಜಲಾನಯನ ಏತ ನೀರಾವರಿ ನಿಗಮ ನಿಯಮಿತವು ಕಾರ್ಯಗತಗೊ ಬೇಕಿದ್ದು. ಆದರ ಪರಿಶೀಲನೆಯಲ್ಲಿದೆ.

ರಾಜ್ಯಾದ್ಯಂತ ಬಾಳೆ ಬೆಳೆಗೆ ಕಟ್ಟೆ ರೋಗ ಬಂದಿರುವುದರ ಬಗ್ಗೆ

೯೭೬. ಶ್ರೀ ಅಜ್ಜಿಬಾಳ್ ಜಿ. ಎಸ್. ಹೆಗ್ಗಡೆ (ಅಂಕೋಲಾ).—ಮಾನ್ಯ ತೋಟಕಾರಿಕೆ ರಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಬಾಳೆ ಬೆಳೆಯುವ ಕ್ಷೇತ್ರ ಎಷ್ಟು ?

ಆ) ರಾಜ್ಯಾದ್ಯಂತ ಕಟ್ಟೆ ರೋಗದಿಂದ ಬಹುತೇಕ ಬಾಳೆ ಬೆಳೆ ನಾಶವಾಗಿದ್ದು ಆದರ ಪುನ ತ್ಪತ್ತಿ ಈಗ ಎಷ್ಟು ಕ್ಷೇತ್ರದಲ್ಲಾಗಿದೆ ?

ಇ) ಈ ರೋಗ ಪೂರ್ಣ ಪತೋಟಿಗೆ ತರಲು ಯಾವ ಕ್ರಮ ಕೈಗೊಳ್ಳಲಾಗಿದೆ ಹಾಗೂ ಇ ರಿಂದ ಯಾವ ರೀತಿ ಫಲಿತಾಂಶ ಕಂಡು ಬಂದಿದೆ ?

ಶ್ರೀ ವೈ. ಕೆ. ರಾಮಯ್ಯ (ತೋಟಗಾರಿಕೆ ರಾಜ್ಯ ಸಚಿವರು).—

ಅ) ಕರ್ನಾಟಕ ರಾಜ್ಯದಲ್ಲಿ ಬಾಳೆ ಬೆಳೆಯನ್ನು ೩೪,೯೦೪ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾ ತ್ತಿದೆ.

ಆ) ಸಮರ್ಪಕವಾದ ವ್ಯವಸಾಯ ಪದ್ಧತಿ ಅನುಸರಿಸಿದರೆ ಈ ನಂಜು ರೋಗ ಪತೋಟಿಯ ಡಲು ಸಾಧ್ಯ, ರೋಗಪೀಡಿತ ಪ್ರದೇಶದ ನಿರ್ಮೂಲನೆ ಮಾಡಿ ಪುನರುತ್ಪತ್ತಿಯಾಗ ಪ್ರದೇಶದ ನಿರ್ದಿ ನಿಖರವಾದ ಮಾಹಿತಿ ಲಭ್ಯವಿಲ್ಲ.